# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :54 ಪ್ರಾ.ಸಾ. :20**

| | | |
|---|---|---|
| ಸಾಕ್ಷಿಯ ಹೆಸರು | : | ರಾಘವೇಂದ್ರ ಡಿ. ದೊಡ್ಡಮನಿ |
| ತಂದೆಯ ಹೆಸರು | : | ದೊಡ್ಡರಾಮಪ್ಪ ದೊಡ್ಡಮನಿ |
| ವಯಸ್ಸು | : | 39 ವರ್ಷ |
| ಕೆಲಸ | : | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಧಾರವಾಡ |
| ವಾಸ | : | ಧಾರವಾಡ |

**ದಿನಾಂಕಃ 14-07-2025 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. 2013 ರಿಂದ ನವೆಂಬರ್ 2018 ರವರೆಗೆ ನಾನು ಜೊಯಿಡಾ ದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಬಿ.ಇ. ಸಿವಿಲ್ ಪದವಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕಟ್ಟಡಗಳ ಹಾಗೂ ಜಮೀನುಗಳ ನಕಾಶೆಯನ್ನು ತಯಾರಿಸುವ ಅನುಭವ ಇರುತ್ತದೆ ಹಾಗೂ ನಾನು ಈಗಾಗಲೇ ಹಲವಾರು ಅಪರಾಧಿಕ ಪ್ರಕರಣದಲ್ಲಿ ನಕಾಶೆಯನ್ನು ತಯಾರಿಸಿ, ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಹಾಗೂ ಸಾಕ್ಷಿ ನುಡಿದಿರುತ್ತೇನೆ.

2. ದಿಃ 26-10-2018 ರಂದು ಪೊಲೀಸ್ ವೃತ್ತ ನಿರೀಕ್ಷಕರು, ಕಾರವಾರ ರವರ ಕಚೇರಿಯಿಂದ ನಮ್ಮ ಕಚೇರಿಗೆ ಈ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಕೋರಿಕೆ ಪತ್ರ ಬಂದಿದ್ದು, ಅದರಂತೆ ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನನಗೆ ನಕಾಶೆಯನ್ನು ತಯಾರಿಸಿಕೊಡುವಂತೆ

ಲಿಖಿತವಾಗಿ ಸೂಚಿಸಿರುತ್ತಾರೆ. ಆ ನಂತರ ನಾನು ಪೊಲೀಸ್ ಠಾಣೆಗೆ ಕರೆ ಮಾಡಿ, ಘಟನಾ ಸ್ಥಳವನ್ನು ತೋರಿಸುವಂತೆ ಕೇಳಿಕೊಂಡಿರುತ್ತೇನೆ. ಆ ನಂತರ ದಿಃ 30-10-2018 ರಂದು ಪೊಲೀಸ್ ಸಿಬ್ಬಂದಿಯಾದ ಚಾಸಾ-41 ಪ್ರಶಾಂತ ಸಾವಂತ ರವರು ನನ್ನನ್ನು ಘಟನಾ ಸ್ಥಳವಾದ ಆಕಳಗವಿಗೆ ಹೋಗುವ ಅರಣ್ಯ ಪ್ರದೇಶದಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಕೊಲೆಯಾದ ಸ್ಥಳವನ್ನು ತೋರಿಸಿದ ಮೇರೆಗೆ ನಾನು ಸದರಿ ಸ್ಥಳವನ್ನು ಪರಿಶೀಲಿಸಿ, ಸ್ಥಳದಲ್ಲಿಯೇ ಕಚ್ಚಾ ನಕಾಶೆಯನ್ನು ತಯಾರಿಸಿ, ನಂತರ ನಮ್ಮ ಕಚೇರಿಗೆ ಹಿಂದಿರುಗಿ ಬಂದು, ಸದರಿ ಕಚ್ಚಾ ನಕಾಶೆಯ ಆಧಾರದ ಮೇಲೆ ಪಕ್ಕಾ ನಕಾಶೆಯನ್ನು ತಯಾರಿಸಿ, ಸಹಿ ಮಾಡಿ, ಅದನ್ನು ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರಿಗೆ ನೀಡಿರುತ್ತೇನೆ ಹಾಗೂ ಕಚ್ಚಾ ನಕಾಶೆಯನ್ನು ನಮ್ಮ ಕಚೇರಿಯ ಕಡತದಲ್ಲಿ ಇಟ್ಟುಕೊಂಡಿರುತ್ತೇನೆ. ಆನಂತರ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ನಾನು ನೀಡಿದ ಪಕ್ಕಾ ನಕಾಶೆಯನ್ನು ದಿಃ 31-10-2018 ರಂದು ಕವಚ ಪತ್ರದೊಂದಿಗೆ ಪೊಲೀಸ್ ವೃತ್ತ ನಿರೀಕ್ಷಕರು, ಕಾರವಾರ ರವರಿಗೆ ನೀಡಿರುತ್ತಾರೆ. ಸಾಕ್ಷಿಯು ತಮ್ಮ ಕಚೇರಿಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-51 ಎಂದು, ಸಾಕ್ಷಿಯು ತಾನು ತಯಾರಿಸಿದ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-52 ಎಂದು, ಸಾಕ್ಷಿಯ ಸಹಿಯನ್ನು ನಿಪಿ-52(ಎ) ಎಂದು ಹಾಗೂ ಕವಚ ಪತ್ರವನ್ನು ನಿಪಿ-53 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-</u>**

3. ಪೊಲೀಸರಿಂದ ಕೋರಿಕೆ ಪತ್ರವು ನನಗೆ ನೇರವಾಗಿ ಬರದ ಕಾರಣ, ಈ ಪ್ರಕರಣದ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನನಗೆ ನೀಡಿದ ಲಿಖಿತ ಸೂಚನೆಯನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ ಹಾಗೂ ಅದು ನಮ್ಮ ಕಚೇರಿಯ ಕಡತದಲ್ಲಿರುತ್ತದೆ. ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನನಗೆ ನೀಡಿದ ಲಿಖಿತ ಸೂಚನೆಯನ್ನು ಪೊಲೀಸರಿಗೆ ನೀಡಲು ಏನಾದರೂ ತೊಂದರೆ ಇತ್ತಾ? ಎಂದರೆ ಸಾಕ್ಷಿಯು ಪೊಲೀಸರ ಕೋರಿಕೆ ಪತ್ರದಲ್ಲಿ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿ ಕೊಡುವಂತೆ ಮಾತ್ರ ತಿಳಿಸಿದ್ದರಿಂದ, ಲಿಖಿತ ಸೂಚನೆಯನ್ನು ನಾನು ಪೊಲೀಸರಿಗೆ

ನೀಡಿರುವುದಿಲ್ಲ. ನನ್ನನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ, ಸ್ಥಳ ತೋರಿಸಿದ ಪೊಲೀಸ್ ಸಿಬ್ಬಂದಿಯಾದ ಚಾಸಾ–41 ರವರು ಕಾರವಾರ ನಗರ ಪೊಲೀಸ್ ಠಾಣೆಯ ಸಿಬ್ಬಂದಿಯಾಗಿರುತ್ತಾರೆ. ಸದರಿ ಪೊಲೀಸ್ ಸಿಬ್ಬಂದಿಯು ಜೋಯಿಡಾದ ನನ್ನ ಕಚೇರಿಗೆ ಬಂದು ನನ್ನನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಜೋಯಿಡಾದ ನನ್ನ ಕಚೇರಿಯಿಂದ ಘಟನಾ ಸ್ಥಳಕ್ಕೆ ತಲುಪಲು ಸುಮಾರು 1 ತಾಸು ಆಗಿರುತ್ತದೆ ಹಾಗೂ ಸ್ಥಳ ತಲುಪಿದ ಸಮಯ ಮಧ್ಯಾಹ್ನ ಸುಮಾರು 1.20 ಗಂಟೆಯಾಗಿರುತ್ತದೆ. ಸದರಿ ಘಟನಾ ಸ್ಥಳದಲ್ಲಿ ನಾವು ಸುಮಾರು 30 ನಿಮಿಷಗಳ ಕಾಲ ಇದ್ದೆವು. ಘಟನಾ ಸ್ಥಳವು ಜೋಯಿಡಾ ತಾಲೂಕಿನಲ್ಲಿ ಬರುತ್ತದೆ. ಕಚ್ಚಾ ನಕಾಶೆಯನ್ನು ಪೊಲೀಸರಿಗೆ ನೀಡಲು ಏನಾದರೂ ತೊಂದರೊ ಇತ್ತಾ? ಎಂದರೆ ಸಾಕ್ಷಿ ನಮ್ಮ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನನಗೆ ನಕಾಶೆಯನ್ನು ತಯಾರಿಸಲು ಸೂಚಿಸಿದ ಮೇರೆಗೆ ನಾನು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ನಾನು ತಯಾರಿಸಿದ ನಿಪಿ–52 ನಕಾಶೆಯಲ್ಲಿ ದಿನಾಂಕವನ್ನು ನಮೂದಿಸಲಾಗಿಲ್ಲ ಎಂದರೆ ಸರಿ.

4. ನಾನು ನನ್ನ ಕಚೇರಿಯಿಂದ ನನ್ನ ವಾಹನದಲ್ಲಿ ಆಕಳುಗವಿ ಚೆಕ್ ಪೋಸ್ಟ್ ವರೆಗೆ ಹೋಗಿ, ಅಲ್ಲಿ ನನ್ನ ವಾಹನವನ್ನು ನಿಲ್ಲಿಸಿ ಆನಂತರ ನಡೆದುಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ನಾನು ವಾಹನ ನಿಲ್ಲಿಸಿದ ಸ್ಥಳದಿಂದ ಘಟನಾ ಸ್ಥಳಕ್ಕೆ 1.1 ಕಿ.ಮೀ. ದೂರ ಇರುತ್ತದೆ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ ಹಾಗೂ ಯಾವುದೇ ನಕಾಶೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ನೀಡದೇ ನಿಪಿ–52 ನಕಾಶೆಯನ್ನು ನಮ್ಮ ಕಚೇರಿಯಲ್ಲಿಯೇ ಪೊಲೀಸರ ಕೋರಿಕೆಯ ಮೇರೆಗೆ ನಮ್ಮ ಮೇಲಾಧಿಕಾರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿಯ ಪರ ಶ್ರೀ ಆರ್.ಕೆ.ಎಂ. ವಕೀಲರಿಂದಃ–**

ಈ ದಿನ 1 ನೇ ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರು ಇರುವುದಿಲ್ಲ. ಆದ್ದರಿಂದ 1 ನೇ ಆರೋಪಿಯೇ ಸ್ವತಃ 2 ಮತ್ತು 3 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿಯ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿಯ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಈ ದಿನ 5 ನೇ ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರು ಇರುವುದಿಲ್ಲ. ಆದ್ದರಿಂದ 5 ನೇ ಆರೋಪಿಯು ಸ್ವತಃ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/–

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ